DOC-25
T-P-2

R No KKNN 12 11-3-14

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು ಆರಮನೆ ಪರಸ್ಕರಿಸಾರ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಿಣಿ ಎಂ. ಎಸ್. ಕೃಷ್ಣರಾವ್ 8 ಪುಟ

ಉರ್ದು ಶಾಲೆಗಳಲ್ಲಿ ಕನಡ ಶಿಕಣ ಕೊಡಬೇಕು

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಲೇ ; ಶ್ರೀ ಯು.ಎಸ್.ಮೋಹನಂವರ್)

●

ಅಹಿಂಸೆಯು ನನ್ನ ಗುರಿಯಾಗಿರದೆ ಸತ್ಯವು ನನ್ನ ಸಾಧನೆಯ ಗುರಿಯಾಗಿದೆ ; ಈ ಸತ್ಯವನ್ನು ಸಿದ್ಧಿಸಿಕೊಳ್ಳಬೇಕಾದರೆ, ನಾವು ನನ್ನ ನಿತ್ಯದ ಜೀವನದಲ್ಲಿ ಅಹಿಂಸೆಯನ್ನು ರೂಢಿಸಿಕೊಳ್ಳದೆ ಅನ್ಯ ಮಾರ್ಗವಿಲ್ಲ. ದೃಢ ನಿಶ್ಚಯ ಪೂರ್ವಕ ಅಹಿಂಸೆಯ ಮಾರ್ಗವನ್ನು ಅನುಸರಿಸಿಕೊಂಡು ಬಂದಲ್ಲಿ ಅದು ನನ್ನನ್ನು ಸತ್ಯದತ್ತ ಕರೆದೊಯ್ಯುತ್ತದೆ ; ಆದರೆ ಹಿಂಸೆಯಿಂದ ಇದು ಸಾಧ್ಯವಿಲ್ಲ ; ಆದ್ದರಿಂದಲೇ ನನಗೆ ಅಹಿಂಸೆಯಲ್ಲಿ ಅಚಲ ನಂಬಿಕೆ ಇದೆ ; ಸತ್ಯವು ನನಗೆ ತಾನೇ ತಾನಾಗಿ ಸಹಜವಾಗಿ ಸಿದ್ಧಿಸಿತು ; ಅಹಿಂಸೆಯನ್ನು ಪೆದ್ಧಿಸಿಕೊಳ್ಳುವುದಕ್ಕಾಗಿ ಮಾತ್ರ ನಾನು ಹೋರಾಡಿದ್ದೇನೆ.

ಅಹಿಂಸೆಯು ನಾವು ಅನುಸರಿಸಬೇಕಾದ ಮಾರ್ಗವಾಗಿರುವುದರಿಂದ ದಿನನಿತ್ಯ ಜೀವನದಲ್ಲಿ ಅದನ್ನು ರೂಢಿಸಿಕೊಳ್ಳಲು ಪ್ರಯತ್ನಿಸುವದು, ಅದರಲ್ಲಿ ಅಶಕ್ತಿ ವಹಿಸುವದು ಸಹಜವಾಗಿದೆ ; ಆದ್ದರಿಂದಲೇ ಅಹಿಂಸೆಯು ಮಾರ್ಗವನ್ನು ಅನುಸರಿಸುವಂತೆ ಅಹಿಂಸೆಯಲ್ಲಿ ಅಶಕ್ತಿ ವಹಿಸುವಂತೆ ಸಾರ್ವಜನಿಕರಿಗೆ ಬೋಧಿಸಬೇಕು ; ಈ ಬೋಧನೆಯ ವಿಚಾರ ಪೂರ್ವಕವಾಗಿಯೂ ಸತ್ಯನಿತ್ಯವೆಂಬುದನ್ನು ನಾವು ಮನಗಾಣಬೇಕು.

ಅಹಿಂಸೆಯು ನನ್ನ ದೇವರು, ಮತ್ತು ಸತ್ಯ, ಸತ್ಯವೇ ನನ್ನ ಪರಮಾತ್ಮ ; ಅಹಿಂಸೆಯ ಅನ್ವೇಷಣೆಯಲ್ಲಿದ್ದಾಗ, ಅದರ ನಿರೀಕ್ಷಣೆಯಲ್ಲಿದ್ದಾಗ, ಸತ್ಯದ ಮೂಲಕ ಅದನ್ನು ಕಂಡುಕೊಳ್ಳಬಹುದೆಂಬುದು ವಿವೇಕವಾಗುತ್ತದೆ ; ಇದೇ ರೀತಿ ಸತ್ಯಕ್ಕಾಗಿ ಹಂಬಲಿಸುವಾಗ ಅಹಿಂಸೆಯ ಮೂಲಕ ಅದನ್ನು ಸಿದ್ಧಿಸಿಕೊಳ್ಳಬಹುದೆಂಬುದು ಸುಸ್ಪಷ್ಟವಾಗುತ್ತದೆ

ಹೊಸ ವಿಚಾರವನ್ನಾಗಲೀ, ಹೊಸ ತತ್ವವನ್ನಾಗಲೀ ನಾನು ಹೊರಡಿಸುತ್ತಿಲ್ಲ; ಸತ್ಯ ಮತ್ತು ಅಹಿಂಸೆ ಎಷ್ಟು ಹಿಂದೆಯೇ ಪ್ರತಿಪಾದಿಸಲ್ಪಟ್ಟ ಪ್ರಾಚೀನ ತತ್ವಗಳಾಗಿವೆ; ಈ ಪ್ರಾಚೀನ ತತ್ವಗಳ ಬಗ್ಗೆ, ಈ ಅಂಶಗಳ ಬಗ್ಗೆ ವಿಶಾಲವಾದ ಪ್ರಮಾಣದಲ್ಲಿ, ಪ್ರಯೋಗಗಳನ್ನು ನಾನಾ ರೀತಿ ನಾನು ಪ್ರಯತ್ನಿಸುತ್ತಿದ್ದೇನೆ ; ಈ ಪ್ರಯತ್ನದಲ್ಲಿ ಈ ಪ್ರಯತ್ನದಲ್ಲಿ, ಈ ಪ್ರಯೋಗಗಳಲ್ಲಿ ನಾನು ಎಷ್ಟೋ ಸಲ ತಪ್ಪು ಮಾಡಿದ್ದೇನೆ, ಮತ್ತು ಈ ತಪ್ಪುಗಳಿಂದ ಬುದ್ಧಿ ಕಲಿತುಕೊಂಡಿದ್ದೇನೆ ; ಇದರಿಂದ ಜೀವನ ಮತ್ತು ಜೀವನದಲ್ಲಿನ ವಿವಿಧ ಸಮಸ್ಯೆಗಳು, ಸತ್ಯ ಮತ್ತು ಅಹಿಂಸೆಯನ್ನು ರೂಢಿ ಮಾಡಿಕೊಳ್ಳುವಲ್ಲಿ, ಆಚರಣೆಗೆ ತರುವಲ್ಲಿ ಪದವಕಾಶಗಳನ್ನು ಒದಗಿಸಿಕೊಡುತ್ತಾಗಿದೆ.

ಸಹಜ ಪ್ರವೃತ್ತಿಯಿಂದ ನಾನು ಸತ್ಯವಾದಿಯಾಗಿದ್ದೇನೆ ; ಆದರೆ ಅಹಿಂಸಾವಾದಿಯಾಗಿಲ್ಲ ; ನಾನು ಅಹಿಂಸೆಗಿಂತ ಸತ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿರುವುದಾಗಿಯೂ, ನಾನು ಅಹಿಂಸಾವಾದಿಯಾಗಿರದೆ ಸತ್ಯವಾದಿಯಾಗಿರುವದಾಗಿಯೂ ನನಗೆಷ್ಟೋಬ್ಬರು ಹೇಳಿರುವುದು ನಿಜವಾಗಿದೆ. ಸತ್ಯಕ್ಕಾಗಿ ಅಹಿಂಸೆಯನ್ನು ಬಲಿ ಕೊಡಲು, ಅದನ್ನು ತ್ಯಜಿಸಲು ನಾನು ಹಿಂದೆ ಮುಂದೆ ನೋಡುವುದಿಲ್ಲ ; ಸತ್ಯದ ಅನ್ವೇಷಣೆಯಲ್ಲಿದ್ದಾಗ ನಾನು ಅಹಿಂಸೆಯನ್ನು ಅರಿತುಕೊಂಡೆನೆಂಬುದು ವಾಸ್ತವಿಕ ಸಂಗತಿಯಾಗಿದೆ.

ಮುಖ್ಯಮಂತ್ರಿಗಳ ಹಿತೋಕ್ತಿ

ಮಂಡ್ಯ — ಸರಕಾರಿ ನೌಕರರ ರಾಜ್ಯ ಮಟ್ಟ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು– ಸರಕಾರಿ ನೌಕರರು ಸಾರ್ವಜನಿಕ ಸೇವಕರೆಂದು ಅರಿತು ಶ್ರೀಸಾಮಾನ್ಯನ ಒಳಿತಕ್ಕಾಗಿ ಕೆಲಸ ನಡೆಸಬೇಕೆಂದು ಹೇಳಿದರು.

★

ಎಂ ಎಲ್ ಎ ಯ ತಲೆಬೋಳಿಸಿದರು

ಅಹಮದಾಬಾದು— ನಾಸಾರಿಯಾಲ್ಲಿನ ಶಾಸಕ ಶ್ರೀ ದಿನಕರ ದೇಸಾಯರವರು ರಾಜೀನಾಮೆ ಕೊಡಲು ಹಿಂತೆಗೆದ್ದರಿಂದ, ದೊಂಬಿ ಜನರು ಅವರನ್ನು ಅವರ ಸ್ನೇಹಿತನ ಮನೆಯಿಂದ ಹೊರಕ್ಕೆ ಎಳೆದುತಂದು ಅವರ ತಲೆಬೋಳಿಸಿ, ಕತ್ತೆಮೇಲೆ ಕೂರಿಸಿ ಮೆರವಣಿಗೆ ಮಾಡಲು ಪ್ರಯತ್ನಿಸಿದಾಗ ಪೋಲೀಸರು ಮಧ್ಯೆ ಪ್ರವೇಶಿಸಿ ಲಾಠಿ ಛಾರ್ಜ್ ಮಾಡಿ ಚದುರಿಸಿದರು.

ವೃದ್ಧಾಶ್ರಮದಲ್ಲಿಯ ಸಾಹಸ

ತಿರುಪತಿ— ನಿವೃತ್ತ ಕೇಂದ್ರ ಕಂದಾಯ ಮಂಡಲಿ ಅಧ್ಯಕ್ಷ 71 ವರ್ಷದ ಶ್ರೀ ಕೃಷ್ಣಮೂರ್ತಿಯವರು ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ನಡೆಸಿದ ಎಂ. ಎ ಮೊದಲನೆ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು, ಈಗ ಕಟ್ಟಕಡೆ ಪರೀಕ್ಷೆಗೆ ಸಿದ್ಧರಾಗುತ್ತಿದ್ದಾರೆ

ಧಾನ್ಯ ದೂಪದಲ್ಲಿ ಭೂಕಂದಾಯ

ಪೌನಾರ್ (ವಾರ್ಧಾ — ಭೂ ಕಂದಾಯಕ್ಕಾಗಿ ಆಹಾರಧಾನ್ಯಗಳನ್ನು ಪಡೆದು, ಬಫರ್ ಸ್ಟಾಕ್ ಶೇಖರಿಸುವಂತೆ ಆಚಾರ್ಯ ವಿನೋಬಾ ಭಾವೆಯವರು ಕೊಟ್ಟ ಸಲಹೆಯನ್ನು ಕೆಲವು ಭಾಗಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರುವ ವಿಷಯವು ಪರೀಕ್ಷಿಸಲಾಗುತ್ತಿದೆಯೆಂದು ಪ್ರಧಾನಿ ಇಂದಿರಾರವರು ಮಹಿಳಾ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು

★

ಜನತಾ ವಿರೋಧ

ವಾಷಿಂಗ್ಟನ್– ಹಿಂದೂಸಾಗರದಲ್ಲಿಯ ಡಿಯಾಗೋ ಗಾರ್ಸಿಯೋದಲ್ಲಿ ಅಮೇರಿಕ ಮಿಲಿಟರಿ ನೆಲ್ಲಾಣ ವಿಸ್ತರಿಸುವುದರ ಬಗ್ಗೆ ಅಮೇರಿಕಾ ಜನತಾ ವಿರೋಧ ಹೆಚ್ಚುತ್ತಿದೆ

★

ಸ್ಕೂಲು ಸಮಾರಂಭ

ಮೈಸೂರು– ಫರೂಕಿಯಾ ಹುಡುಗರ ಪ್ರೌಢಶಾಲಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರು, ವಾಕ್ಫ್ ಮಂಡಲಿಯ ಅಧೀನದಲ್ಲಿರುವ ಅನಾಥ ಆಸ್ತಿಗಳ ಸಂರಕ್ಷಣೆ ಮತ್ತು ನಡೆಸಿಕೊಂಡುಬರುವ ಬಗ್ಗೆ ವಾಕ್ಫ್ ಅಭಿವೃದ್ಧಿ ಕಾರ್ಪೊರೇಷನ್ ಮಸೂದೆಯನ್ನು ಈಗಿನ ಅಥವಾ ಮುಂಬಿನ ಶಾಸನಸಭಾಧಿವೇಶನದಲ್ಲಿ ತರಲಾಗುವುದೆಂದು ಹೇಳಿದರು – ಅಧ್ಯಕ್ಷತೆ ವಹಿಸಿದ್ದ ಮಾಜಿ ಮಂತ್ರಿಗಳೂ ಮತ್ತು ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ಅಧ್ಯಕ್ಷರೂ ಆದ ಶ್ರೀ ಅಜೀಜ್ ಸೇಟ್‌ರವರು, ಉರ್ದುಶಾಲೆಗಳಲ್ಲಿ ಕನ್ನಡವನ್ನು ಖಡ್ಡಾಯಮಾಡಲು ಸರಕಾರವನ್ನು ವಿನಂತಿಸಿದರು ; ಉರ್ದು ಮಾತನಾಡುವವರ ಪ್ರಯೋಜನಕ್ಕಾಗಿ ವಯಸ್ಕರ ವಿದ್ಯಾ ತರಗತಿಗಳನ್ನು ಪ್ರಾರಂಭಿಸಲು ಸಲಹೆ ಮಾಡಿದರು.

ಇವಳು ನಾರಿಯೋ, ಮಾರಿಯೋ ?

ಲಂಡ್ನ— ವಿವಾಹವಿಚ್ಛೇದನಾ ಕೋರ್ಟ್‌ನಲ್ಲಿ ಒಬ್ಬ ಲಾಯರು ತನ್ನ ಇಂಜಿನಿಯರ್ ಕಕ್ಷೀಗಾರಕ್ಷ ಮೇಲೆ ಅವನ ಪತ್ನಿ ಹಿಂಸಾತ್ಮಕ ಕೈಗೊಳ್ಳುತ್ತಿದಾಳೆಂದೂ ಪ್ರತಿ ದಿನ ಅವನು ಕೆಲಸದಿಂದ ವಾಪಸ್ಸು ಬಂದಾಗ ಹೊಡೆದು ಬಡಿಯುವದಾಗಿ ದೆಡರಿಸುತ್ತಿರುವಳೆಂದೂ, ಒಂದು ದಿನ ಅವನನ್ನು ಒಳಕ್ಕೆ ಬಿಡದೆ ಹೊರಗೆ ಸುರಿಯುವ ಮಳೆಯಲ್ಲೇ ನಿಲ್ಲಿಸಿದ್ದಳೆಂದೂ ತರುವಾಯ ಒಳಕ್ಕೆ ಬಿಟ್ಟು ಜೋರಾಗಿ ಒದ್ದಳೆಂದೂ ಅವನು ಪ್ರಜ್ಞಾಪೂರ್ವಕವಾಗಿ ಬಿದ್ದನೆಂಬೂ ಹೇಳಿದರು – 32 ವರ್ಷಗಳ ವಿವಾಹಾನಂತರ ಈ ದಂಪತಿಗಳು ಪ್ರತ್ಯೇಕವಾಗಿ ವಾಸಿಸುತ್ತಿರುವರು – ಸತಿ ಗಾರ್ಹಸ್ಥ್ಯಕ್ಕೆ, ಅವಳ ಗಂಡನನ್ನು ಹಿಂಸಿಸಬಾರದು, ಹೊಡೆಯಬಾರದು ಎಂದು ಜಡ್ಜರು ಆಜ್ಞೆ ಮಾಡಿರುವರು.

★

ಕರ್ನಾಟಕ ಬಂದ್

ಬೆಂಗಳೂರು— ಸೋಷಲಿಸ್ಟ್ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿ, ಮಾರ್ಕ್ಸಿಸ್ಟ್ ಪಾರ್ಟಿ, ರಿಪಬ್ಲಿಕ್ ಪಾರ್ಟಿಗಳು ತಾ॥ 23 ಮತ್ತು 24 ರಂದು ಸಮ್ಮೇಳನ ನಡೆಸಿ, ಏಪ್ರಿಲ್‌ನಲ್ಲಿ " ಕರ್ನಾಟಕ ಬಂದ್ " ಗೆ ಕರೆಕೊಡಲು ನಿರ್ಧರಿಸಿವೆ.

ಜನಸಂಖ್ಯೆ

ವಿಶ್ವಸಂಸ್ಥೆ – 100 ವರ್ಷಗಳಲ್ಲಿ ವಿಶ್ವಜನಸಂಖ್ಯೆ ದೆಳವಣಿಗೆ ನಿಂತು, ಸುಮಾರು 12 3 ಬಿಲಿಯರ್ಡ್‌ಗೆ ಸ್ಥಿಮಿತಗೊಳ್ಳುವುದೆಂದು ನೂತನ ವಿಶ್ವ ಸಂಸ್ಥೆ ವರದಿ ತಿಳಿಸುತ್ತೆ

Quality Printing Neat Binding

Lakshminaraasimha Press

Sivarampet, Mysore 1

Contribute Liberally

to the National Defence Fund

SHAKTI SUDHA

A Superb Tonic

Help The Gorakshana

— HumanitarianPropoganda Monthly ....

ವುಡ್‌ಲಾಂಡ್ 8 3 74 ರಿಂದ

ಅವೋಘ 2 ನೇ ವಾರ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್; ನವೀನ್ ನಿಶ್ಚಲ್, ರೀಖ

ದಿನ 3 ಪ್ರದರ್ಶನಗಳು

★

ಅಪೆರಾ 3 ನೇ ವಾರ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ ; ಗೋಪಿ ಸಂಗೀತ : ಆರ್. ಕಪ್ಪ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram, Mysore